# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಪ.ವಿ–VIಬಿ/ಯು.ಜಿ/ತ.ಬ.ಮಾ.ಬ/2024–25.

ಪರೀಕ್ಷಾ ವಿಭಾಗ
ಜ್ಞಾನಭಾರತಿ ಆವರಣ
ಬೆಂಗಳೂರು–560056.
ದಿನಾಂಕ:14.03.2025.

## <u>ಸುತ್ತೋಲೆ</u>

ವಿಷಯ: NEP (UUCMS) 2022–23, 2023–24,& 2024–25 ನೇ ಸಾಲಿನ ಪದವಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಓ.ಎಂ.ಆರ್. ಶೀಟ್ ತಪ್ಪಾಗಿ ಶೇಡಿಂಗ್ ಮಡಿರುವ ಬಗ್ಗೆ.

ಉಲ್ಲೇಖ:1. ಪ.ವಿ–VIB/ಯು.ಜಿ/ OMR ಶೇಡಿಂಗ್/2024–25, ದಿನಾಂಕ:12.04.2023.
2. ಪ.ವಿ–VIಬಿ/ಯು.ಜಿ/ತ.ಬ.ಮಾ.ಬ/2023–24. ದಿನಾಂಕ:11.10.2023.
3. ಮಾನ್ಯ ಕುಲಪತಿಗಳ ಅನುಮೋದನೆ, ದಿನಾಂಕ: 14/03/2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಬೆಂಗಳೂರು ವಿಶ್ವವಿದ್ಯಾಲಯ, ವ್ಯಾಪ್ತಿಗೆ ಒಳಪಡುವ ಸಂಯೋಜಿತ ಕೆಲವು ಕಾಲೇಜುಗಳು ಮತ್ತು ಜ್ಞಾನಭಾರತಿ ಆವರಣದ ಕಾಲೇಜುಗಳ ವಿದ್ಯಾರ್ಥಿಗಳು 2022–23, 2023–24, 2024–25 ನೇ ಸಾಲಿನ NEP ಹಾಗೂ SEP ನ ಓ.ಎಂ.ಆರ್. ಶೀಟ್‌ನಲ್ಲಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಯನ್ನು ತಪ್ಪಾಗಿ ಶೇಡಿಂಗ್ (Wrongly Bubbled) ಮಾಡಿರುತ್ತಾರೆ.

ಉಲ್ಲೇಖಿತ 3ನೇ ಸುತ್ತೋಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಒಂದು ಬಾರಿ ಅವಕಾಶವೆಂದು ಮುಂದಿನ ದಿನಗಳಲ್ಲಿ ಈ ತಪ್ಪುಗಳು ಮರುಕಳಿಸದಂತೆ ಎಚ್ಚರಿಕೆ ನೀಡಿ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಪ್ರತಿ ಬಾರಿ ಪರೀಕ್ಷೆ ಪ್ರಾರಂಭವಾಗುವ ಮೊದಲು ಎಲ್ಲಾ ಕಾಲೇಜು ಪ್ರಾಂಶುಪಾಲರು ಮತ್ತು ಪರೀಕ್ಷಾ ಕೇಂದ್ರಗಳ ಚೀಫ್ ಸೂಪರಿಂಟೆಂಡೆಂಟ್ ಅನ್ನು ಕರೆದು ಪರೀಕ್ಷಾ ಕೇಂದ್ರಗಳಲ್ಲಿ ಆಗುವ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಒಂದು ದಿನದ ಕಾರ್ಯಾಗಾರ ಮಾಡಲಾಗಿದೆ ಹಾಗೂ ಪರೀಕ್ಷಾ ಕೊಠಡಿಯ ಮೇಲ್ವಿಚಾರಕರ ಗಮನಕ್ಕೆ ತರಲು ಸಭೆ ಕರೆದು ಸೂಚಿಸಲಾಗಿದೆ.

ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಈ ರೀತಿ ಪುನಾರಾವರ್ತನೆಯಾಗದಂತೆ ಕ್ರಮವಹಿಸತಕ್ಕದ್ದು, ಅಲ್ಲದೆ ಪಟ್ಟಿಯಲ್ಲಿ ನಮೂದಿಸಲಾದ ವಿದ್ಯಾರ್ಥಿಗಳು ಓ.ಎಂ.ಆರ್. ಶೀಟ್‌ನಲ್ಲಿ ತಪ್ಪಾಗಿ ಶೇಡಿಂಗ್ (Wrongly Bubbled) ಮಾಡಿರುವುದರಿಂದ ಒಂದು ಬಾರಿ ಅವಕಾಶವೆಂದು ವಿಶೇಷವಾಗಿ ವಿದ್ಯಾರ್ಥಿಗಳ ಹಿತದುಷ್ಠಿಯಲ್ಲಿ ಪ್ರತಿ ವಿದ್ಯಾರ್ಥಿಗೆ ರೂ. 500/– ರಂತೆ ದಂಡ ಶುಲ್ಕವಾಗಿ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ತಪ್ಪಿದ್ದಲ್ಲಿ ಫಲಿತಾಂಶಗಳನ್ನು ತಡೆಹಿಡಿಯಲಾಗುವುದು ಎಂದು ತಮ್ಮ ಗಮನಕ್ಕೆ ತರಲಾಗಿದೆ.

15/3/25

ಕುಲಸಚಿವರು (ಮೌಲ್ಯಮಾಪನ)

ಗೆ,
ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ/ವಿಭಾಗದ ಮುಖ್ಯಸ್ಥರುಗಳಿಗೆ.

ಪ್ರತಿಗಳು:
1. ಮಾನ್ಯ ಕುಲಪತಿಗಳು/ಕುಲಸಚಿವರ ಆಪ್ತಕಾರ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಸಿಸ್ಟಮ್ ಅನಾಲಿಸ್ಟ್, **ಡಿಜಿಟಲ್** ಮೌಲ್ಯಮಾಪನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.